Dc-324
T.P.-2

(1)

51st Year of Publication * SATYAVADI Daily, MYSORE 4

Reg No B G 155

24 - 6 - 1968

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ

ಕಛೇರಿಯಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆಮೇಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 6

ಸತ್ಯವಾದಿ

ಸ್ಥಾಪಕರು : ತರುಣ ಸಿದ್ಧಾರ್ಥ ಎಂ. ಸಿ. ಸುಬ್ಬರಾವ್ ಸಂಪಾದಕ : ನಿರ್ಭಯ ಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

A Straight Dea
If you want a Straight Deal
Then go Straight to
Bank Road Bahusar.
The Shop with one Price,
a Fair Price, and a really
favourable price.
No worry. No Higgle-haggling.

ಡಿ. ಎಂ. ಕೆ. ಮಂತ್ರಿಗಳ ಮೇಲೆ ಆಪಾದನೆ

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಜುಲೈನಲ್ಲಿ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮಿತ್ರೋತ್ತರ ಗಣ್ಯರು ಅಭಿಭಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇಂಜಾನಿಯವರು, ಶ್ರೀ ಮಾಧವ್ ಶೆನ್ವಾರವಯ, ಶ್ರೀ ಎಂ. ಬಿ. ಬಸವಯ್ಯನವರು, ಆಸೆರಾ ಟಾಕೇಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ.ಮೋದಿಯವರು ಡಾ || ಆರ್. ಎಸ್. ನೆಂಜುಂಡಸ್ವಾಮಿ (ಗ್ಲಾಸ್ಗೋ) ಯವರು ಶುಭಾಶಯಹೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತಿಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಲೋಕಾಗಿ ವಿನಂತಿಸಿ, ಈಡೇರುವುದೆಂದು ಆಶಿಸಿ, ಕೃತಜ್ಞತಾಪೂರ್ವಕ ವಂದಿಸುತ್ತೇವೆ.

ಸಂಪಾದಕ 'ಸತ್ಯವಾದಿ'

ಚಾಮರಾಜಪುರಂ, ಮೈಸೂರು 4.

ಕಸ್ಟಂಸ್‌ರಿಂದ ವಶ

★ ನವದೆಹಲಿ— ಕಸ್ಟಂಸಿನವರು ಕಳೆದ ತಿಂಗಳಲ್ಲಿ ರೂ. 1.13 ಕೋಟಿ ಮೌಲ್ಯದ ಪದಾರ್ಥಗಳನ್ನು ವಶಪಡಿಸಿಕೊಂಡರು ; ಈ ವೈಕೆ ರೂ. 12.54 ಲಕ್ಷವಷ್ಟು ಬಿಸ್ತು.

★

ಪುರಸಭೆ

ಮೈಸೂರು— ಈ ತಿಂಗಳ ಸಾಧಾರಣ ಪುರಸಭಾಧಿವೇಶನವು ತಾ || 29 ನೇ ಶನಿವಾರ ಮಧ್ಯಾಹ್ನಾತ್ಪರ 4 ಘಂಟೆಗೆ ನಡೆಯುವುದಾಗಿದೆ.

★

ಆಕ್ಕಸಾಲಿಗರಿಗೆ ತಿಳುವಳಿಕೆ

ಸ್ಪೆಡಚೂರು— ಸಾಲಪಡೆದಿರುವ ಅಗಸಾಲಿಗರು, ತಮ್ಮ ಕಸುಬಿಗೆ ಹಿಂತಿರುಗಬೇಕಾದರೆ ಸಾಲದ ಹಣವನ್ನು ವಾಪಸ್ಸು ಮಾಡುವಂತೆ ಕೇಂದ್ರ ಆಬ್ಕಾರಿ ಅಧಿಕಾರಿಗಳು ಕೇಳಿಕೆ ಹಾಕಿಡಾರೆ.

★

ವಿಮಾನಕುಮಾರಿ ಲಂಡನ್ನಿಗೆ

ಬೆಂಗಳೂರು— ಪಿತ್ತಕೋಶದ ಸಂಬಂಧದ ಕಾಯಿಲೆಯಿಂದ ನರಳುತ್ತಿರುವ ಚಲಚ್ಚಿತ್ರ ತಾರೆ ವಿಮಾನಕುಮಾರಿ ಲಂಡನ್ನಿನಲ್ಲಿ ಚಿಕಿತ್ಸೆಗಾಗಿ ನಿನ್ನೆ ಪ್ರಯಾಣ ಮಾಡಿದಳು.

★

ಸಮ್ಮೇಳನ

ಮೈಸೂರು— ಮೈಸೂರು ಜಿಲ್ಲಾ ಗಂಗವಾತಸ್ಥರ ಪ್ರಥಮ ಸಮ್ಮೇಳನವು ನಿನ್ನೆ ನಡೆಯಿತು.

★

ಹೊಸ ದಿನಪತ್ರಿಕೆ

ಮೈಸೂರು— "ಗೂಢಚಾರಿ" ದಿನಪತ್ರಿಕೆಯ ಪ್ರಾರಂಭೋತ್ಸವವು ನಿನ್ನೆ ವೈಭವವಾಗಿ ನೆರವೇರಿತು. ನಮ್ಮ ನೂತನ ಬಂಧುವು ಚಿರಕಾಲ ಯಶಸ್ವಿಯಾಗಿ ಬಾಳಲೆಂದು ಹಾರೈಸುತ್ತೇವೆ.

★

ಜಾಕ್‌ಪಾಟ್

ಬೆಂಗಳೂರು— ನಿನ್ನೆ ಕುದುರೆ ಜೂಜಿನಲ್ಲಿ ಜಾಕ್‌ಪಾಟ್ ಪೂಲ್‌ನಲ್ಲಿ 2 ಟಕೀಟುಗಳಿಗೆ ತಲಾ ರೂ. 50363 ಸಿಕ್ಕಿತು.

ಮಹಾರ್ಜ ಕಮಿಷ್ಟ ತೀರ್ಪು

ಬೆಂಗಳೂರು— ರಾಜ್ಯಗಳ ಗಡಿ ವ್ಯಾಜ್ಯಗಳ ಪರಿಶೀಲನೆಗೆ ಖಾಯಂ ಸಮಿತಿ ನಿರ್ಮಿಸಲು ರಾಷ್ಟ್ರೀಯ ಭಾವೈಕ್ಯ ಸಮಿತಿ ಶಿಫಾರಸು ಮಾಡಿರುವುದಾದರೂ, ಮಹಾಜನ ಕಮಿಷ್ಟ ತೀರ್ಪು ಈ ಸಮಿತಿಗೆ ಹೋಗುವುದಿಲ್ಲವೆಂದು ಪ್ರಧಾನಿಗಳೂ ಉಪ ಪ್ರಧಾನಿಗಳೂ ಭರವಸೆ ನೀಡಿರುವುದಾಗಿ ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರು

★

ಪ್ರವಾಸ ಕೇಂದ್ರ

ಮಂಡ್ಯ— ಈ ಜಿಲ್ಲೆಯ ಪ್ರಖ್ಯಾತ ಯಾತ್ರಾಕೇಂದ್ರವಾದ ಮೇಲುಕೋಟೆಯನ್ನು ರೂ. 40 ಲಕ್ಷ ಖರ್ಚಿನಿಂದ ಐದು ವರ್ಷಗಳಲ್ಲಿ ಪ್ರವಾಸ ಕೇಂದ್ರವಾಗಿ ಅಭಿವೃದ್ಧಿಗೊಳಿಸಲಾಗುವುದು.

★

ಮುಖ್ಯಮಂತ್ರಿಗಳಿಗೆ ಸುಸ್ವಾಗತ

ಮೈಸೂರು— ನಗರಕ್ಕೆ ಪ್ರಪ್ರಥಮವಾಗಿ ದಯಮಾಡಿಸುತ್ತಿರುವ ಮುಖ್ಯ ಮಂತ್ರಿಗಳಾದ ಶ್ರೀ ವೀರೇಂದ್ರ ಪಾಟೀಲರನ್ನು ರಾಜೇಂದ್ರ ಸರ್ಕಲ್ ಬಳಿ ಈ ಬೆಳಿಗ್ಗೆ ಗೌರವಪೂರ್ವಕವಾಗಿ ಸ್ವಾಗತಿಸಲಾಯಿತು. ಪುರಸಭೆಯವರು ಏರ್ಪಡಿಸಿದ್ದರು.

★

ಹೀಗಾಗಬೇಕು

ತ್ರಿನಗರ— ಅಸಮರ್ಥ ಮಂತ್ರಿಗಳು ತಮ್ಮ ಪದವಿಯನ್ನು ಬಿಡಬೇಕೆಂದು ಉಪ ಪ್ರಧಾನಿಯವರು ಹೇಳಿದರು.

●

ಕಳ್ಳ ಅಧಿಕಾರಿಗಳು

ಭುವನೇಶ್ವರ— ರಾಜ್ಯ ಸರಕಾರದ ಇಬ್ಬರು ನಿವೃತ್ತ ಚೀಫ್ ಇಂಜೀಯರ ಮನೆ ಶೋಧಿಸಿ, ಆಕ್ಷೇಪಕರ ಕಾಗದಪತ್ರ ಮತ್ತು ತುಂಬಾ ಚಿನ್ನ ಮತ್ತಿತರ ಪದಾರ್ಥಗಳನ್ನು ವಶಪಡಿಸಿಕೊಳ್ಳಲಾಯಿತು.

ಡಿ ಎಂ ಕೆ ಮಂತ್ರಿಗಳ ಮೇಲೆ

ರಾಜಪಾಳ್ಯಂ— ಬಸ್ ರೂಟು ಪರ್ಮಿಟ್‌ಗಳನ್ನೂ ಮತ್ತು ಕೈಗಾರಿಕಾ ಸಂಸ್ಥೆಗಳಿಗೆ ಪರ್ಮಿಟ್ಟನ್ನೂ ಕೊಟ್ಟು, ಡಿಎಂಕೆ ಮಂತ್ರಿಗಳು ಕಮಿಷ್ಟ ಪಡೆದು ಹಣ ಶೇಖರಿಸುತ್ತಿದ್ದಾರೆಂದು ಮಾಜಿ ಮುಖ್ಯಮಂತ್ರಿ ಶ್ರೀ ಭಕ್ತವತ್ಸಲಂ ಆಪಾದಿಸಿರುವರು.

★

ರಾಜ್ಯಕ್ಕೆ ಪ್ರಧಾನಿಗಳ ಭೇಟಿ

ಬೆಂಗಳೂರು ರಾಜ್ಯಕ್ಕೆ ಪ್ರಧಾನಿ ಇಂದಿರಾರವರು ಸೆಪ್ಟಂಬರು ತಿಂಗಳಲ್ಲಿ ಭೇಟಿ ಕೊಡುವಂತೆ ಮುಖ್ಯ ಮಂತ್ರಿಗಳು ಆಹ್ವಾನ ನೀಡಿದ್ದಾರೆ.

★

ಫ್ರಾನ್ಸಿನಲ್ಲಿ ಚುನಾವಣೆ

ಪ್ಯಾರಿಸ್— ಫ್ರಾನ್ಸಿನ ರಾಷ್ಟ್ರೀಯ ಅಸೆಂಬ್ಲಿಯ 470 ಸ್ಥಾನಗಳಿಗೆ 2267 ಉಮೇದುವಾರರು ಸ್ಪರ್ಧಿಸಿದ್ದಾರೆ – ಮೊದಲ ಓಟಿಂಗು ನಿನ್ನೆ ಪ್ರಾರಂಭವಾಯಿತು.

●

ಬ್ರಹ್ಮಪುತ್ರ ಹಾವಳಿ

ಗೌಹತಿ— ಬ್ರಹ್ಮಪುತ್ರ ಮತ್ತು ಅದರ ಉಪನದಿಗಳ ನೆರೆಹಾವಳಿಯಿಂದ ಒಂದು ವಾರದಲ್ಲಿ 250000 ಮಂದಿ ಮನೆಮಠ ವಿಲ್ಲದವರಾದರು.

★

ಭಾವೆಯವರಿಗೆ ಜಿಲ್ಲಾ ದಾನ

ಲಕ್ನೋ— ಉತ್ತರ ಪ್ರದೇಶದ ಉತ್ತರಕಾಶಿ ಮತ್ತು ಬಾಲಿಯಾ ಜಿಲ್ಲೆಗಳು ಆಚಾರ್ಯ ವಿನೋಬಾ ಭಾವೆಯವರಿಗೆ ದಾನಾ ಮಾಡಲಾಯಿತು.

★ ಹೈದರಾಬಾದು— ಡಾಂಗಲಿ ಗ್ರಾಮದಲ್ಲಿ ಭೂಮಿ ವ್ಯಾಜ್ಯದಲ್ಲಿ ಒಬ್ಬ ಸತ್ತು ಒಬ್ಬ ಗಾಯಗೊಂಡನು.

ಭಕ್ತ ತುಳಸೀದಾಸ್

(ಮುಂದುವರಿದುದು)

ತುಳಸೀದಾಸನ ಹೃದಯದಲ್ಲೆಲ್ಲಾ ಭೂತದ ಮನೋಹರವಾದ ಮಾತುಗಳು ತುಂಬಿತ್ತು : ತನ್ನ ಸೃಷ್ಟಿಕರ್ತನ, ಪ್ರಭುವಿನ ಮತ್ತು ರಕ್ಷಕನ ಕಥೆ ಕಡೆಗೆ ಮೋಹಿತನಾಗಿರಲಿಲ್ಲ. ಉತ್ಸುಕತಾ ನಿರೀಕ್ಷೆಯಿಂದ ಅಲ್ಲಿ ಸೇರಿದ ಜನರನ್ನೆಲ್ಲಾ ನೋಡುತ್ತಾ, ಕಡೆಗೆ ಭೂತ ವಿಷಯದಲ್ಲಿ ತನ್ನಂತಹ ಮನುಷ್ಯನನ್ನು ಕಂಡೊಡನೆಯೇ ಅವನ ಹೃದಯವು ಆನಂದಭರಿತವಾಯಿತು. ಖಂಡಿತವಾಗಿ ಅಸಹ್ಯಕರವಾದ ಶರೀರ ಒಡೆದಿರುವ ಕುಷ್ಠರೋಗಿಯು ಸಭೆಯಿಂದ ದೂರದಲ್ಲಿ ಕುಳಿತು, ಮಾನವನಿಂದ ಸಾಧ್ಯವಾಗದ ಭಕ್ತಿಯಿಂದ ರಾಮಾಯಣವನ್ನು ಅಲಿಸುತ್ತಿದ್ದನು.

ತುಳಸೀದಾಸನಿಗೆ ರಾಮಾಯಣದ ಕಡೆ ಲಕ್ಷ್ಯವಿರಲಿಲ್ಲ : ಅವನ ಗಮನವೆಲ್ಲಾ ಅಸಹ್ಯಕರವಾದ ಕುಷ್ಠರೋಗಿಯ ಕಡೆ ಇತ್ತು. ಅವನೇ ಹನುಮಂತ, ಶ್ರೀ ರಾಮಚಂದ್ರನವನು, ಎಂಬುದನ್ನು ತಿಳಿಯುವುದು ಅವನಿಗೆ ಕಷ್ಟವಾಗಲಿಲ್ಲ. ಕಥೆಯು ಕೊನೆಗೊಂಡಾಗ ಎಲ್ಲರೂ ಆತಾತುರವಾಗಿ ಹೊರಡಲು ಪಕ್ರಮಿಸಿದರು ; ಕುಷ್ಠರೋಗಿಯು ಎಲ್ಲರೂ ಹೊರಟುಹೋಗುವವರೆಗೆ ಕಾದಿದ್ದು, ನಂತರ ಸುತ್ತಮುತ್ತ ನೋಡಿ ಹೊರಟನು.

(ಮುಂದುವರಿಯುವುದು)

ಪುಡ್‌ಲಾಂಡ್ಸ್ ದಿಗ್ವಿಜಯ 8 ನೇ ವಾರ

ಷಾಗಿರ್ದ್ Shagird

ತಾರಾಗಣ— ಜಾಯ್ ಮುಖರ್ಜಿ, ಸೈರಾಬಾನು, ನಾಜರ್‌ಹುಸೇನ್
ಅಚ್ಚಲ ಸಹದೇವ್, ಐ. ಎಸ್. ಜೋಹರ್ [ದಿನ 3 ಪ್ರದರ್ಶನ]

.... ಸುಬೋಧ್ ಮುಖರ್ಜಿಯವರ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ ....

ಆಪೆರ— 21—6—68 ರಿಂದ

ಪವಿತ್ರ ಪಿಕ್ಚರ್ಸ್‌ರವರ

ಅನುಬವಳಿ [ತಮಿಳು]

ಪಾತ್ರ— ಜೈಶಂಕರ್, ಎಲ್. ವಿಜಯಲಕ್ಷ್ಮಿ, ನಾಗೇಶ್

SHAKTI
SUDHA

A Superb Tonic



ಗೋಹತ್ಯೆ ಕೂಡಲೆ ಮುಚ್ಚಬೇಕೆಂದು ಆಗ್ರಹಿಸಿ ನಡೆಯುತ್ತಿರುವ ಪ್ರದರ್ಶನ

Cow Slaughter should be banned Immediately

Help The Gorakshana

ಗೋರಕ್ಷಣಾಕ್ಕೆ ಬೆಂಬಲ ನೀಡಿ

— ಗೋರಕ್ಷಣಾ ವ್ಯವಸ್ಥಾಪಕರ ವಿನಂತಿ —

ಗೋರಕ್ಷಣಾಕ್ಕೆ ಲಾಭಾಂಶಗಳನ್ನೂ ಪ್ರೋತ್ಸಾಹ ಧನವನ್ನೂ
ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ಚಂದಾವಾಯಿದೆ ಕಳೆದಿರುವವರು ಇವರಲ್ಲಿ ಚಂದಾ ಪಾವತಿಮಾಡಬೇಕಾಗಿ ವಿನಂತಿ

ಡಾ|| ಪಿ ಎಸ್ ನಾರಾಯಣ್, ಶ್ರೀ ಪಿಎಸ್ ವಿಶ್ವನಾಥ್ ಜಯನಗರ, ಬೆಂಗಳೂರು
ಶ್ರೀ ಬಿ ಜಿ. ಶಾಸ್ತ್ರಿಗಳು, 1030 ವಿದ್ಯಾರಣ್ಯಪುರಂ, ಮೈಸೂರು
ಶ್ರೀ ಅಸಂಖನಂಪಂಹಯ್ಯಂಗಾರ್, ಶಾಸ್ತ್ರಿಧರ್ಮಪ್ರಚಾರಸಭಾ ಹೊಂಗನೂರು
ಗೋರಕ್ಷಣ ಆಫೀಸು ಶಿಕ್ಷಕವಾಣಿ ಪ್ರೆಸ್ ಚಾಮರಾಜಪುರಂ ಮೈಸೂರು

ವಿಳಾಸ — ಗೋರಕ್ಷಣ ಆಫೀಸು 1067 ಚಾಮರಾಜಪುರಂ, ಮೈಸೂರು

Golden Jubilee of 'Satyavadi'

The golden jubilee of the 'Satyavadi' is to be celebrated very soon.

The President, the Prime Minister, H H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

It is welknown that golden jubilee of newspapers in India is rare and almost unknown in Mysore state. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Edited, Printed & Published by Dharmapracharo Nirata M S Krishna Rao (Proprietor) at the Satyavadi Press Chamarajapuram, Mysoe 4